**ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ**

**ಸಿ.ಸಿ.ನಂಃ503/2018**

**ಸಿಡಬ್ಲ್ಯು-21**

**ಪಿಡಬ್ಲ್ಯು-9**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮಂಜುನಾಥ |
| ತಂದೆಯ ಹೆಸರು | ಃ | ಪೊನ್ನಪ್ಪ |
| ವಯಸ್ಸು | ಃ | 47 ವರ್ಷ |
| ವೃತ್ತಿ | ಃ | ಹೆಚ್ ಸಿ |
| ವಾಸಸ್ಥಳ | ಃ | ವಿರಾಜಪೇಟೆ |

**ದಿನಾಂಕಃ 26-10-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಎಪಿಪಿಯವರಿಂದಃ-**

ನಾನು 2010 ರಿಂದ 2016 ರವರೆಗೆ ವಿರಾಜಪೇಟೆ ನಗರ ಪೊಲೀಸ್ ಠಾಣೆಯಲ್ಲಿ ಪಿಸಿ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ15.11.2013 ರಂದು ಚಾಸಾಃ26 ರವರೊಂದಿಗೆ ನಾನು, ಚಾಸಾಃ22,23 ರವರು ಗಸ್ತು ಕರ್ತವ್ಯದಲ್ಲಿದ್ದಾಗ ವಿರಾಜಪೇಟೆ ನಗರ ಕೆಎಸ್ಆರ್ಟಿಸಿ ಬಸ್ ನಿಲ್ದಾಣದ ಬಳಿ ಇರುವ ಶಾಂತಿ ನಗರದಲ್ಲಿ ಒಬ್ಬ ವ್ಯಕ್ತಿ ಸಃ7.30 ಗಂಟೆಗೆ ಅನುಮಾನಸ್ಪದವಾಗಿ ತಿರುಗಾಡುತ್ತಿರುವುದಾಗಿ ಮಾಹಿತಿ ಬಂದ ಮೇರೆಗೆ ಜೀಪಿನಲ್ಲಿದ್ದ ನಾವುಗಳು ಶಾಂತಿನಗರಕ್ಕೆ ಬಂದು ನೋಡಿದಾಗ ಅಲ್ಲಿ ಒಬ್ಬ ವ್ಯಕ್ತಿ ಇದ್ದು ಅವನನ್ನು ಹೆಸರು, ವಿಳಾಸ ಕೇಳಿದಾಗ ಒಮ್ಮೆ ಕೇರಳದಲ್ಲಿ ಹಾಗೂ ಮತ್ತೊಮ್ಮೆ ಮೈಸೂರಿನಲ್ಲಿರುವುದಾಗಿ ಹೆಸರು ಸಲೀಂ ಎಂದು ತಡವರಿಸಿ ಹೇಳಿರುತ್ತಾನೆ. ನಂತರ ಅವರ ಜೇಬನ್ನು ಪರೀಕ್ಷಿಸಿದಾಗ ಜೇಬಿನಲ್ಲಿ ಚಿನ್ನಾಭರಣ ಮತ್ತು ಒಂದು ಟಾರ್ಚ್ ಇರುವುದು ಕಂಡು ಬಂದಿರುತ್ತದೆ. ಆತನು ಸಮರ್ಪಕವಾಗಿ ಉತ್ತರ ನೀಡದೇ ಇರುವುದರಿಂದ ಅದೇ ದಿನ 8.00 ಗಂಟೆಗೆ ಪಿಎಸ್ ಐ ರವರ ವರದಿ ತಯಾರಿಸಿಕೊಂಡು ಚಾಸಾಃ28 ರವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಆನಂತರ ಚಾಸಾಃ28 ರವರು ಆತನನ್ನು ವಿಚಾರಿಸಲಾಗಿ ಆತನ ಹೆಸರು ಸಲೀಂ , ಮಂಡವ್ ಪುರಂ ಗ್ರಾಮ, ಉಳಿಕಲ್, ಕಣ್ಣೂರು ಜಿಲ್ಲೆ , ಕೇರಳ ರಾಜ್ಯ ಎಂದು ತಿಳಿಸಿರುತ್ತಾನೆ . ಕೆಲವು ದಿನಗಳ ಹಿಂದೆ ಸಿದ್ದಾಪುರ ರಸ್ತೆಯಲ್ಲಿರುವ ಒಂದು ಮನೆ, ವಿರಾಜಪೇಟೆ ಗಡಿಯಾರಕಂಬದ ಮುಂದೆ ಇರುವ ರಸ್ತೆಯ ಎಡಗಡೆಯ ಒಂದು ಮನೆ, ವಿರಾಜಪೇಟೆಯಿಂದ ಗೋಣಿಕೊಪ್ಪ ರಸ್ತೆಗೆ ಹೋಗುವ ಒಂದು ಮನೆಯಲ್ಲಿ ಕಳ್ಳತನಮಾಡಿರುವುದು, ಗೋಣಿಕೊಪ್ಪದಲ್ಲಿ 3 ಅಂಗಡಿಗಳು , ಪಿರಿಯಾಪಟ್ಟಣದಲ್ಲಿ ಪೆಟ್ರೋಲ್ ಬಂಕ್ನ ಬೀಗ ಒಡೆದು ಕಳ್ಳತನ ಮಾಡಿರುವುದಾಗಿ ಹೇಳಿಕೆ ನೀಡಿರುತ್ತಾನೆ ಹಾಗೂ ಇವುಗಳನ್ನು ವಿರಾಜಪೇಟೆ ಮತ್ತು ಮೈಸೂರಿನಲ್ಲಿ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾನೆ.

ಚಾಸಾಃ28 ರವರು ನಮ್ಮನ್ನು ಕರೆದುಕೊಂಡು ಚಿನ್ನಾಭರಣಗಳನ್ನು ನೀಡಿರುವ ಚಾಸಾಃ12 ಮತ್ತು 13 ರವರ ಮನೆಗೆ ಕರೆದುಕೊಂಡು ಹೋಗಿರುತ್ತಾನೆ. ನಂತರ ಮೈಸೂರಿನಲ್ಲಿರುವ ಅಶ್ವಿನಿ ಜುವೆಲ್ಲರಿಯಲ್ಲಿ ಒಡವೆಗಳನ್ನು ಮಾರಾಟ ಮಾಡಿರುವುದಾಗಿ ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿರುತ್ತಾನೆ. ನಂತರ ವಿರಾಜಪೇಟೆ ವಿನಾಯಕ ಜುವೆಲ್ಲರಿಗೂ ಕರೆದುಕೊಂಡು ಹೋಗಿರುತ್ತಾನೆ. ನಂತರ ಆರೋಪಿ ಕಳ್ಳತನಮಾಡಿರುವ ಜಾಗಗಳನ್ನು ತೋರಿಸಿರುತ್ತಾನೆ ನಾನು ಅವನೊಂದಿಗೆ ಹೋಗಿರುತ್ತೇನೆ. ಮೈಸೂರಿನ ಗೋಕುಲಂನಲ್ಲಿರುವ ವೆಂಕಟೇಶ್ ಹೇರ್ ಕಟ್ಟಿಂಗ್ ಅಂಗಡಿಯಲ್ಲಿ ಲ್ಯಾಪ್ ಟಾಪನ್ನು ಮಾರಾಟ ಮಾಡಿರುವುದಾಗಿ ಆರೋಪಿ ತಿಳಿಸಿದ್ದು ಆರೋಪಿ ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿರುತ್ತಾನೆ . ಅದೇ ರೀತಿ ಹುಣಸೂರಿನ ಕೆಎಸ್ಆರ್ಟಿಸಿ ಬಸ್ ನಿಲ್ದಾಣದಲ್ಲಿ ನೈನ್ ಟು ನೈನ್ ಮೊಬೈಲ್ ಅಂಗಡಿಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಮಹಜರ್ ಮೂಲಕ ಪಂಚರ ಸಮಕ್ಷಮ

ವಶಪಡಿಸಿಕೊಳ್ಳಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ಸಾಕ್ಷಿ ದೃಶ್ಯ ಮಾಧ್ಯಮದ ಮೂಲಕ ನೋಡಿ ಗುರುತಿಸಿರುತ್ತಾರೆ. ನಿಪಿ-13 ಮತ್ತು 14 ರಲ್ಲಿರುವ ಸೊತ್ತುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟಿ ಸವಾಲುಃ** ಪಾಟೀಸವಾಲಿಗೆ ಸಮಯಾವ ಕೋರಿದ್ದು , ಸಮಯಾವಕಾಶ ನೀಡಲಾಯಿತು.

**ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ.ಹೇ.ಕೇ.ಸ.ಇದೆ.

ಸಿ.ಮಹಾಲಕ್ಷ್ಮಿ
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ವಿರಾಜಪೇಟೆ